ಕರ್ನಾಟಕ ಸರ್ಕಾರ

ಸಂ.ಡಿಟಿಇ/06/ಎಸ್‌ಸಿಹೆಚ್(1)/2018-19

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001.
ದಿನಾಂಕ:20-08-2018.

-::: ಸುತ್ತೋಲೆ ::-

**ವಿಷಯ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ನೀಡುವ ಜಾತಿ/ಆದಾಯ ಪ್ರಮಾಣ ಪತ್ರದ ಸಿಂಧುತ್ವದ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು ಇವರ ಪತ್ರ ಸಂಖ್ಯೆ:ಇಡಿ.178.ಟಿಇಸಿ.2015. ದಿ :30-07-2018.
2. ಸರ್ಕಾರದ ಅಧೀನ ಕಾರ್ಯದರ್ಶಿಯವರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಅನಧಿಕೃತ ಟಿಪ್ಪಣಿಯ ಪತ್ರ ಸಂಖ್ಯೆ:ಸಕಇ.190.ಎಸ್‌ಎಡಿ.2017. ದಿ:19-07-2018.
3. ಅ.ಟಿ.ಸಂಖ್ಯೆ:ಇಡಿ.178.ಟಿಇಸಿ.2015. ದಿ:28-03-2018.

********

ಸಿ.ಇ.ಟಿ.,ಕಾಮೆಡ್-ಕೆ ಮತ್ತು ಡೀಮ್ಡ್ ಯುನಿವರ್ಸಿಟಿ ಕಾಲೇಜುಗಳಲ್ಲಿ ಪ್ರವೇಶಾತಿ ಪಡೆಯುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ದಾಖಲಾತಿಯನ್ನು ನೀಡುವ ಮುನ್ನ ಉಲ್ಲೇಖ(02)ರ ಅನಧಿಕೃತ ಟಿಪ್ಪಣಿಯ ಈ ಕೆಳಗಿನ ಅಂಶವನ್ನು ಗಮನಿಸಲು ಸುಚಿಸಿಲಾಗಿದೆ.

1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ತಾಲ್ಲೂಕು ತಹಸೀಲ್ದಾರರಿಂದ (ಗ್ರೇಡ್-1&2) ಮಾತ್ರ ಪಡೆದು ವಿದ್ಯಾರ್ಥಿ ವೇತನ/ಶುಲ್ಕಪಾವತಿ/ಮರುಪಾವತಿಗಾಗಿ ಸಲ್ಲಿಸತಕ್ಕದ್ದು. ಸದರಿ ಜಾತಿ ಪ್ರಮಾಣ ಪತ್ರವು ಸಂಬಂಧಿಸಿದ ಪ್ರಾಧಿಕಾರದಿಂದ ರದ್ದುಪಡಿಸಿರುವವರೆಗೆ ಶಾಶ್ವತವಾಗಿ ಚಾಲ್ತಿಯಲ್ಲಿರುತ್ತದೆ. ಒಂದು ವೇಳೆ ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರಗಳ ಬಗ್ಗೆ ಯಾವುದೇ ಸಂದೇಹವಿದ್ದಲ್ಲಿ, ಕಂದಾಯ ಇಲಾಖೆಯ ವೆಬ್‌ಸೈಟ್ www.nadakacheri.karnataka.gov.inನಲ್ಲಿ ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರದಲ್ಲಿರುವ ಆರ್‌ಡಿ ನಂಬರ್ ಮೂಲಕ ಪರಿಶೀಲಿಸುವುದು.

2. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ತಮ್ಮ ಕುಟುಂಬದ ಎಲ್ಲಾ ಮೂಲಗಳಿಂದ ಬರುವ ಆದಾಯದ ಬಗ್ಗೆ ಆದಾಯ ಪ್ರಮಾಣ ಪತ್ರಗಳನ್ನು ತಾಲ್ಲೂಕು ತಹಸೀಲ್ದಾರರಿಂದ (ಗ್ರೇಡ್-1&2) ಮಾತ್ರ ಪಡೆದು ವಿದ್ಯಾರ್ಥಿ ವೇತನ/ಶುಲ್ಕಪಾವತಿ/ಮರುಪಾವತಿಗಾಗಿ ಸಲ್ಲಿಸತಕ್ಕದ್ದು. ಸದರಿ ಆದಾಯ ಪ್ರಮಾಣ ಪತ್ರ ಐದು ವರ್ಷದ ಅವಧಿವರೆಗೆ ಚಾಲ್ತಿಯಲ್ಲಿರುತ್ತದೆ (ಪ್ರತಿ ವರ್ಷ ಆದಾಯ ಪ್ರಮಾಣ ಪತ್ರವನ್ನು ಪಡೆಯುವ ಅವಶ್ಯಕತೆ ಇರುವುದಿಲ್ಲ). ಆದರೆ ಅಭ್ಯರ್ಥಿಯ ತಂದೆ-ತಾಯಿ ಕೇಂದ್ರ/ರಾಜ್ಯ ಸರ್ಕಾರ ಮತ್ತು ಅದರಡಿ ಬರುವ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಅಥವಾ ಪಿಂಚಣಿ ಪಡೆಯುತ್ತಿದ್ದಲ್ಲಿ, ಆದಾಯ ಪ್ರಮಾಣ ಪತ್ರದ ಜೊತೆಗೆ ಅವರ ವೇತನ ಪ್ರಮಾಣ ಪತ್ರವನ್ನು ಸಹ ಕಡ್ಡಾಯವಾಗಿ ಪಡೆಯತಕ್ಕದ್ದು, ಇದರಿಂದ ಅಭ್ಯರ್ಥಿಗಳ ಕುಟುಂಬದ ನೈಜ ವಾರ್ಷಿಕ ಆದಾಯದ ಬಗ್ಗೆ ಖಾತ್ರಿಪಡಿಸಿಕೊಳ್ಳಲು ಸಾಧ್ಯವಾಗುತ್ತದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಈ ಮೇಲಿನ ಅಂಶವನ್ನು ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಚುರ ಪಡಿಸಿ ಹಾಗೂ ತರಗತಿಗಳಲ್ಲಿ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲು ಕ್ರಮವಹಿಸುವುದು.

**ನಿರ್ದೇಶಕರು**
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001

**ಇವರಿಗೆ,**

1. ಪ್ರಾಂಶುಪಾಲರು, ಕರ್ನಾಟಕ ರಾಜ್ಯದ ಎಲ್ಲಾ ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳ ಸೂಕ್ತ ಕ್ರಮಕ್ಕಾಗಿ.
2. ಸಂಯೋಜನಾಧಿಕಾರಿಯವರು, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. (ಪ್ರಚುರ ಪಡಿಸಲು).